ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 10-11-2016

## ಪತ್ರಿಕಾ ಆಮಂತ್ರಣ

1. **National Retailers Training Program on Standards & Labeling.**
   **Chief Guest:**
   **B. P. Pandey,**
   **Special Secretary, Ministry of Power,**
   **Govt. of India.**
   **Date : 11-11-2016 Friday Time : 5-00 PM.**
   **Place : The Capitol, Raj Bhavan Road,**
   **Bengaluru-560 001.**

## ಪತ್ರಿಕಾ ಪ್ರಕಟಣೆ

## ಮಾಜಿ ಪ್ರಧಾನಿ ದಿವಂಗತ ಜವಾಹರ್ ಲಾಲ್ ನೆಹರು ಅವರ 127ನೇ ಜನ್ಮ ದಿನಾಚರಣೆ

ಬೆಂಗಳೂರು, ನವೆಂಬರ್ 10 (ಕರ್ನಾಟಕ ವಾರ್ತೆ)

ಮಾಜಿ ಪ್ರಧಾನ ಮಂತ್ರಿ ದಿವಂಗತ ಜವಾಹರ್ ಲಾಲ್ ನೆಹರು ರವರ 127 ನೇ ಜನ್ಮ ದಿನದ ಅಂಗವಾಗಿ ನವೆಂಬರ್ 14 ರ ಸೋಮವಾರದಂದು ಬೆಳಿಗ್ಗೆ 9-30 ಗಂಟೆಗೆ ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಮಾಜಿ ಪ್ರಧಾನ ಮಂತ್ರಿ ದಿವಂಗತ ಜವಾಹರ್ ಲಾಲ್ ನೆಹರುರವರ ಪ್ರತಿಮೆ ಬಳಿಯಿರುವ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವರು.

ಎಸ್‍ಎಂ:ಜೆಡಿ:ಜಿಪಿಆರ್.

# ಮುಖ್ಯಮಂತ್ರಿಗಳಿಂದ ಬರಪೀಡಿತ ಪ್ರದೇಶಗಳ ವೀಕ್ಷಣೆ

ಬೆಂಗಳೂರು, ನವೆಂಬರ್ 10 (ಕರ್ನಾಟಕ ವಾರ್ತೆ)

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವೆಂಬರ್ 11 ಮತ್ತು 12 ರಂದು ಮೈಸೂರು, ಬೆಳಗಾವಿ, ಧಾರವಾಡ ಮತ್ತು ಗದಗ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು.

ನವೆಂಬರ್ 11 ರಂದು ಬೆಳಿಗ್ಗೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕಲಕುಪ್ಪಿ, ಸವದತ್ತಿ ತಾಲ್ಲೂಕಿನ ಚಚಡಿ, ಬೂದಿಗೊಪ್ಪ, ಯರಗಟ್ಟಿ ಗ್ರಾಮಗಳ ಬರಪೀಡಿತ ಪ್ರದೇಶಗಳಿಗೆ ಭೇಟಿ ಮಾಡುವರು.

ಅಂದು ಮಧ್ಯಾಹ್ನ ಸವದತ್ತಿ ತಾಲ್ಲೂಕಿನ ಹಿರೇಉಳ್ಳಿಗೇರಿ ಗ್ರಾಮಗಳ ಬೆಳೆಹಾನಿ ಪ್ರದೇಶಗಳ ವೀಕ್ಷಣೆ. ಧಾರವಾಡ ತಾಲ್ಲೂಕಿನ ಹಾರೂಬೆಳವಡಿ, ಬಂಡಿವಾಡ, ಹುಬ್ಬಳ್ಳಿ ತಾಲ್ಲೂಕಿನ ಶಿರಗುಪ್ಪಿ ಹಾಗೂ ಕುಂದಗೋಳ ತಾಲ್ಲೂಕಿನ ಯರಗುಪ್ಪಿ ಮತ್ತು ರೊಟ್ಟಿಗವಾಡ ಗ್ರಾಮಗಳ ಬರಪೀಡಿತ ಪ್ರದೇಶಕ್ಕೆ ಭೇಟಿ, ನವಲಗುಂದ ತಾಲ್ಲೂಕಿನ ನಲವಡಿ ಗ್ರಾಮದ ಎಂಜಿಎನ್‍ಆರ್‍ಇಜಿಎ ಕಾಮಗಾರಿ ಪರಿಶೀಲನೆ ಮತ್ತು ಧಾರವಾಡ ಜಿಲ್ಲೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವರು.

**ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ:**

ನವೆಂಬರ್ 12 ರಂದು ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಸಿಂಗಟಾಲೂರು ಏತ ನೀರಾವರಿ ಯೋಜನೆಯ ಎಡಭಾಗದ ಮೊದಲನೇ ಹಂತದ ನೀರೆತ್ತುವ ಘಟಕದ ಲೋಕಾರ್ಪಣೆ ಮಾಡಲಿರುವ ಅವರು ನಂತರ ತುಂಗಭದ್ರಾ ನದಿಯ ವೀಕ್ಷಣೆ ಹಾಗೂ ಬಾಗಿನ ಅರ್ಪಣೆ ಹಾಗೂ ಡಂಬಳ ಕೆರೆಗೆ ನೀರು ತುಂಬಿಸಿದ ಕಾಮಗಾರಿ ಪರಿಶೀಲನೆ ಹಾಗೂ ಗಂಗಾಪೂಜೆ ನೆರವೇರಿಸುವರು.

ಗದಗ ತಾಲ್ಲೂಕಿನ ಕದಾಂಪೂರ – ಪಾಪನಾಶಿ ಮಾರ್ಗ ಮಧ್ಯದಲ್ಲಿರುವ ಜಂದಿ ಪೀರಾ ದರ್ಗಾದ ಹತ್ತಿರ ಹನಿ ನೀರಾವರಿ ಯೋಜನೆಯ ಉದ್ಘಾಟನೆ ಬಳಿಕ ಶ್ರೀ ಕನಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ, ಗದಗ ಇವರ ವತಿಯಿಂದ ನಿರ್ಮಿಸಿರುವ ಶ್ರೀ ದೇವರಾಜ ಅರಸು ಭವನ, ಗದಗದಲ್ಲಿ ನಿರ್ಮಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನ ಉದ್ಘಾಟನೆ ನೆರವೇರಿಸಲಿರುವ ಮುಖ್ಯಮಂತ್ರಿಗಳು ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ, ಅಂದೇ ಬೆಂಗಳೂರಿಗೆ ಹಿಂದಿರುಗುವರು.

ಎಸ್‌ಎಂ:ಜೆಡಿ:ಜಿಪಿಆರ್.

# DAK ADALAT

Bengaluru, November 10 (Karnataka Information)

The Chief Postmaster General, Karnataka Postal Circle, No. 1, Beaulieu, Palace Road (Opposite Maharani's College of Science) Bengaluru- 560 001 will conduct a 'DAK ADALAT" for redressal of public grievances relating to Postal Services on 28th November 2016 at 11-00 hours. Members of the public and esteemed customers of Department of Posts in Bengaluru Region may address their grievances if any, to The Assistant Director (Postal Operations), O/o Chief Postmaster General, Karnataka Circle, Bengaluru - 560 001, so as to reach the officer latest by 16th November 2016. Grievances can also be sent by a e mail to tech.ka@indiapost.gov.in/karcopo@gmail.com. It is requested that brief and specific details with relevant facts & figures may please be furnished along with complete contact details to facilitate speedy redressal.

jd/gpr

# ಮಾವು ಬೆಳೆಯ ಸರ್ವಾಂಗೀಣ ಅಭಿವೃದ್ಧಿಗೆ ವಿನೂತನ ಕಾರ್ಯಕ್ರಮಗಳು –ಸಚಿವ ರಮೇಶ್‌ಕುಮಾರ್

ಬೆಂಗಳೂರು, ನವೆಂಬರ್ 10 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿನ ಮಾವಿನ ಬೆಳೆಯ ಸರ್ವಾಂಗೀಣ ಅಭಿವೃದ್ದಿ ಮತ್ತು ಮಾವು ಬೆಳೆಗಾರರ ಅಭ್ಯುದಯಕ್ಕೆ ಪೂರಕವಾಗಿ ಮಾವು ಬೇಸಾಯ, ಕೋಯ್ಲೋತ್ತರ ನಿರ್ವಹಣೆ, ಮಾವು ಮಾರಾಟ ಮತ್ತು ಮಾವಿನ ಹಣ್ಣುಗಳ ರಫ್ತಿಗೆ ಪ್ರೋತ್ಸಾಹಿಸುವ ವಿನೂತನ ಕಾರ್ಯಕ್ರಮಗಳನ್ನು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಹಮ್ಮಿಕೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ಕೋಲಾರ

ಜಿಲ್ಲಾ ಉಸ್ತುವಾರಿ ಸಚಿವರು ಆದ ಕೆ.ಆರ್. ರಮೇಶ್‌ಕುಮಾರ್ ಅವರು ರೈತರಿಗೆ ಕರೆ ನೀಡಿದರು.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ನೂತನ ಅಧ್ಯಕ್ಷ ಎಲ್. ಗೋಪಾಲಕೃಷ್ಣರವರ ಪದಗ್ರಹಣ ಕಾರ್ಯಕ್ರಮ ಹಾಗೂ 'ಮಾವು ಉದ್ದಿಮೆಯಲ್ಲಿ ಅವಕಾಶಗಳು ಮತ್ತು ಸವಾಲುಗಳು' ಕುರಿತ ರೈತರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಕಾರ್ಮಿಕರ ಮೂಲಕ ಕೋಲಿನಿಂದ ಮಾವಿನ ಹಣ್ಣನ್ನು ಕಟಾವು ಮಾಡುವ ಹಳೆಯ ಪದ್ಧತಿಯನ್ನು ಕೈಬಿಟ್ಟು ವೈಜ್ಞಾನಿಕ ರೀತಿಯಲ್ಲಿ ಮಾವಿನ ಹಣ್ಣಿನ ಕಟಾವು ಮಾಡಿದಲ್ಲಿ ತಾಜಾ ರೂಪದ ಮಾವಿನ ಹಣ್ಣುಗಳಿಗೆ ಉತ್ತಮ ಮಾರುಕಟ್ಟೆಯನ್ನು ರೈತರು ಕಂಡುಕೊಳ್ಳಬಹುದಾಗಿದೆ ಎಂದರು.

ಅಕಾಲಿಕ ಸಮಯದಲ್ಲೂ ಸಹ ಮಾವಿನಬೆಳೆ ಬೆಳೆಯುವ ನಿಟ್ಟಿನಲ್ಲಿ ವಿಜ್ಞಾನಿಗಳು ಸಂಶೋಧನೆ ಕೈಗೊಳ್ಳುವಂತೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಿಜ್ಞಾನಿಗಳಲ್ಲಿ ಸಚಿವರು ಈ ಸಂದರ್ಭ ಮನವಿ ಮಾಡಿದರು.

ಮಾವು ನಿಗಮದ ನೂತನ ಅಧ್ಯಕ್ಷ ಎಲ್. ಗೋಪಾಕೃಷ್ಣ ಅವರು ಮಾತನಾಡಿ ಯಾವುದೇ ಬೆಳೆಗೆ ನೀರಿನ ಅವಶ್ಯಕತೆ ಅತಿ ಮುಖ್ಯ. ಮಾವು ಬೆಳೆ ಮಳೆಯಾಶ್ರಿತ ಬೆಳೆಯಾಗಿದೆ. ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಮಾವು ಬೆಳೆಯುವ ಬೆಳೆಗಾರರು 1400 ರಿಂದ 1500 ಅಡಿವರೆಗೆ ಕೊಳವೆ ಬಾವಿ ಕೊರೆದು ಹನಿ ನೀರಾವರಿ ಮೂಲಕ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಮಾವಿನ ಬೆಳೆಯನ್ನು ಬೆಳೆಯುತ್ತಿದ್ದಾರೆ. ಆದರೆ ಎಲ್ಲಾ ರೈತರಿಗೂ ಈ ಅನುಕೂಲವಿಲ್ಲದ ಕಾರಣ ಈ ಜಿಲ್ಲೆಗಳ ರೈತರಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವುದು ತಮ್ಮ ಪ್ರಥಮ ಆದ್ಯತೆಯಾಗಿದೆ ಎಂದರು.

ಕೋರಮಂಗಲ-ಚಳ್ಳಘಟ್ಟ ಕೊಳಚೆ ನೀರನ್ನು ಸಂಸ್ಕರಿಸಿ ಅದನ್ನು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ 126 ಕೆರೆಗಳಿಗೆ ತುಂಬಿಸುವುದರಿಂದ ಅಂತರ್ಜಲ ಹೆಚ್ಚಿ ಮಾವು ಬೆಳೆಯುವ ರೈತರಿಗೆ ಅನುಕೂಲವಾಗಲಿದ್ದು ಈ ಯೋಜನೆಯನ್ನು ತ್ವರಿತ ಗತಿಯಲ್ಲಿ ಜಾರಿಗೆ ತರುವಂತೆ ಸಚಿವರಲ್ಲಿ ಗೋಪಾಲಕೃಷ್ಣ ಅವರು ಮನವಿ ಮಾಡಿದರು.

ತೋಟಗಾರಿಗೆ ಇಲಾಖೆಯಲ್ಲಿ ಜಾರಿಯಿರುವ ಕಾರ್ಯಕ್ರಮಗಳಂತೆಯೇ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮಕ್ಕೂ ಯೋಜನೆಗಳನ್ನು ನೀಡಿದಲ್ಲಿ ಮಾವು ಬೆಳೆಯುವ ರೈತರ ಬಹುತೇಕ ಸಮಸ್ಯೆಗಳು ನೀಗಿದಂತಾಗುತ್ತದೆ ಎಂದ ಅವರು, ಈ ನಿಟ್ಟಿನಲ್ಲಿ ತಮ್ಮ ಮುಂದಿನ ದಿನಗಳಲ್ಲಿ ಪ್ರಯತ್ನಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯರಾದ ಕೆ.ಹೆಚ್. ಮುನಿಯಪ್ಪ, ನಿಗಮದ ಮಾಜಿ ಅಧ್ಯಕ್ಷರಾದ ಎಂ.ಕಮಲಾಕ್ಷಿ ರಾಜಣ್ಣ, ವ್ಯವಸ್ಥಾಪಕ ನಿರ್ದೇಶಕರಾದ ಕದಿರೇಗೌಡ ಮುಂತಾದವರು ಉಪಸ್ಥಿತರಿದ್ದರು.

ಎಸ್.ಎಂ/ಎಂ.ಆರ್.ಎಂ/ಜಿಪಿಆರ್.